<u>ಅಸಲು ದಾವಾ ನಂಬ್ರ: **79/2014** ಪಿಡಬ್ಲ್ಯೂ- **1**</u>

ದಿನಾಂಕ: **12-09-2018** ರಂದು ಸಾಕ್ಷಿಯನ್ನು ಪುನಹ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

<u>ಮುಂದುವರಿದ ಪಾಟಿ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಜೆ. ಎಸ್. ರವರಿಂದ</u>

ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ವಿರುದ್ಧ ಈ ದಾವೆಯನ್ನು ಹೂಡಲು ಯಾವುದಾದರೂ ಕಾರಣ ಇದೆಯಾ ಎಂದರೆ ಸಾಕ್ಷಿ ಮೂರು ಮತ್ತು ನಾಲ್ಕನೇ ಪ್ರತಿವಾದಿಯರು ಎ.ಸಿ. ಮತ್ತು ಡಿ ಸಿ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾವೆ ಹೂಡಿರುತ್ತಾರೆ ಆದ್ದರಿಂದ ನಾನು ಅವರು ವಿರುದ್ಧ ಈ ದಾವೆಯನ್ನು ಹೂಡಿರುತ್ತೇನೆ. ನನಗೆ ಮತ್ತು ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರಿಗೆ ಯಾವುದೇ ವೈಯಕ್ತಿಕ ದ್ವೇಷ ಇರುವುದಿಲ್ಲ. ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ವೈಯಕ್ತಿಕ ನೆಲೆಯಲ್ಲಿ ದಾವೆ ಹೂಡಿದ್ದಾ ಅಥವಾ ಪಂಚಾಯತ್ ನವರ ಪರವಾಗಿ ಈ ಮುಂಚೆ ಹೇಳಿದ ದಾವೆ ಹೂಡಿದ್ದಾ ಎಂದರೆ ಸಾಕ್ಷಿ ಪಂಚಾಯತ್ ನವರ ಪರವಾಗಿ ಅಂದರೆ ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ರವರ ಪ್ರತಿನಿಧಿಯಾಗಿ ಸದ್ರಿ ದಾವೆಗಳನ್ನು ಹೂಡಿದ್ದಾರೆ ಎಂದು ನುಡಿಯುತ್ತಾರೆ. ಆ ದಾವೆಯನ್ನು ದಾಖಲಿಸುವಾಗ ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ಒಂದನೇ ಪ್ರತಿವಾದಿ ಪಂಚಾಯತ್‌ನ ಸದಸ್ಯರಾಗಿದ್ದರು. ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ಒಂದನೇ ಪ್ರತಿವಾದಿ ಪಂಚಾಯತ್‌ನ ಸದಸ್ಯರಾಗಿ ಸದ್ರಿ ದಾವೆ ಮಾಡಿದ್ದಾ ಅಥವಾ ಒಂದನೇ ಪ್ರತಿವಾದಿ ಪಂಚಾಯತ್‌ನ ಅಧ್ಯಕ್ಷರಾಗಿ ದಾವೆ ಮಾಡಿದ್ದಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ಒಂದನೇ ಪ್ರತಿವಾದಿ ಪಂಚಾಯತ್‌ನ ಪ್ರತಿನಿಧಿಯಾಗಿ ಈ ಮೇಲೆ ಹೇಳಿದ ದಾವೆಗಳನ್ನು ಹೂಡಿದ ಮಾಹಿತಿಯನ್ನು ನಾನು ನಮ್ಮ ವಕೀಲರಿಗೆ ಈ ದಾವೆಯನ್ನು ಮಾಡುವಾಗ ಹೇಳಿದ್ದೇನೆ. ಸದ್ರಿ ದಾವೆಗಳನ್ನು ಹೂಡುವಾಗ ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ಗ್ರಾಮ ಪಂಚಾಯತ್ ನ ಯಾವ ಹುದ್ದೆಯನ್ನು ಹೊಂದಿ ಸದ್ರಿ ದಾವೆಯನ್ನು ಹೂಡಿದ್ದರು ಎಂಬ ಬಗ್ಗೆ ನಾನು ಪ್ರಯತ್ನ ಪಟ್ಟಿರುವುದಿಲ್ಲ, ಆ ರೀತಿ ತಿಳಿದುಕೊಳ್ಳಲು ಯಾವುದಾದರೂ ತೊಂದರೆ ಇರಲಿಲ್ಲ. ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ನನ ವಿರುದ್ಧ ಈ ಮೇಲೆ ಹೇಳಿದ ದಾವೆಗಳನ್ನು ಹೂಡುವಾಗ ಯಾವುದೇ ವೈಯಕ್ತಿಕ ದ್ವೇಷದಿಂದ ಹೂಡಿದ್ದಾ ಮತ್ತು ವೈಯಕ್ತಿಕ ನೆಲೆಯಲ್ಲಿ ಹೂಡಿದ್ದಾ ಎಂಬ ಮಹಿತಿಯನ್ನು ಈ ದಾವೆಯ ನನ್ನ ವಕೀಲರಿಗೆ ತಿಳಿಸಿರುತ್ತೇನೆ. ನಾನು ಈ ಮೇಲ ಹೇಳಿದ ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ನನ್ನ ವಿರುದ್ಧ ಹೂಡಿರುವ ಪ್ರಕರಣಗಳು ಎಂದರೆ ನಿಪಿ-*1* ರಿಂದ ನಿಪಿ-*3* ರಲ್ಲಿರುವ ಪ್ರಕರಣಗಳಾಗಿರುತ್ತದೆ. ಈ ಮೂರು ಪ್ರಕರಣಗಳಲ್ಲದೆ ನನ್ನ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.

ನಿಪಿ-*1* ರ ದಾಖಲೆಯಲ್ಲಿ ಮೂರನೇ ಪ್ರತಿವಾದಿ ಮತ್ತು ನಾಲ್ಕನೇ ಪ್ರತಿವಾದಿಯರು ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ನಲ್ಲಿ ಹೊಂದಿದ್ದ ಹುದ್ದೆಯನ್ನು ಹೇಳಿಕೊಂಡಿದ್ದಾರೆ ಎಂದರೆ ಸರಿ. ನಿಪಿ-*1* ರ ಪ್ರಕರಣದಲ್ಲಿ ನನಗೂ ಮತ್ತು ಈ ದಾವೆಯ ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್‌ನವರಿಗೆ ತಕರಾರು ಇರುವ ಸ್ಥಳ ಸ.ನಂ. ***231/4* ಬಿ*(1)*** ಸರಕಾರಿ ಸ್ಥಳ ವಿಸ್ತೀರ್ಣ ***5*** ಸೆಂಟ್ಸ ಆಗಿರುತ್ತದೆ. ಆ ಸ್ಥಳ ಮೂರನೇ ಪ್ರತಿವಾದಿ ಆನಂದ ದೇವಾಡಿಗರ ವಾರ್ಡಿನ ವ್ಯಾಪ್ತಿಗೆ ಒಳಪಟ್ಟ ಸ್ಥಳವಾಗಿರುತ್ತದೆ ಎಂದರೆ ಸರಿ . ನಿಪಿ-*1* ರಿಂದ ನಿಪಿ-***3*** ರ ಪ್ರಕರಣವನ್ನು ನನ್ನ ವಿರುದ್ಧ ಹೂಡಲು ಈ ದಾವೆಯ ಪಂಚಾಯತ್ ನಲ್ಲಿ ನಿರ್ಣಯವಾಗಿತ್ತು ಎಂದು ನುಡಿಯುತ್ತಾರೆ. ಆ ನಿರ್ಣಯದಲ್ಲಿ ಈ ದಾವೆಯ ***3*** ಮತ್ತು ***4*** ನೇ ಪ್ರತಿವಾದಿಯರು ಒಂದನೇ ಪ್ರತಿವಾದಿ ಪಂಚಾಯತ್ ಅನ್ನು ನಿಪಿ-*1* ರಿಂದ ನಿಪಿ-***3*** ರಲ್ಲಿ ಹೇಳಿರುವ ದಾವೆಯಲ್ಲಿ ಪ್ರತಿನಿಧಿಸಬೇಕು ಎಂದು ನಿರ್ಣಯವಾಗಿತ್ತು, ಸದ್ರಿ ನಿರ್ಣಯದ ವಿರುದ್ಧ ಅಪೀಲು ಮಾಡಿದ್ದೀರಾ ಎಂದರೆ ಸಾಕ್ಷಿ ಅಪೀಲು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯ *1* ರಿಂದ *4* ನೇ ಪ್ರತಿವಾದಿಯರು ನಿಪಿ-*1* ರಿಂದ ***3*** ನೇ ದಾಖಲೆಯಲ್ಲಿ ಕಾಣುವ ದಾವೆಗಳನ್ನು ಕರ್ನಾಟಕ ಪಂಚಾಯತ್ ರಾಜ್ ಕಾನೂನು ಮತ್ತು ಕಾಯಿದೆ ಪ್ರಕಾರ ತಮಗಿರುವ ಹಕ್ಕನ್ನು ಉಪಯೋಗಿಸಿ ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಯಾವುದೇ ವೈಯಕ್ತಿಕ ನೆಲೆಯಲ್ಲಿ ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ . ಪ್ರತಿವಾದಿ *1* ರಿಂದ *4* ನೇ ರವರ ವಿರುದ್ಧ ಈ ದಾವೆಯನ್ನು ಹೂಡಲು ಸಂಬಂಧಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿದ್ದೀರಾ ಎಂದರೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ಕಾಣಿಸಿರುವ ದಾವೆಯಲ್ಲಿ ನಾನು ಕೇಳುತ್ತಿರುವ ಸ್ಥಳ ಸ.ನಂ. 231/4 ಬಿ 1 ಸರಕಾರಿ ಸ್ಥಳದ ಒಟ್ಟು ವಿಸ್ತೀರ್ಣ ಎಪ್ಪತ್ತನಾಲ್ಕುವರೆ ಸೆಂಟ್ಸ್‌ನ ಒಂದು ಭಾಗವಾಗಿತ್ತು. ತೆಕ್ಕಟ್ಟೆ ಪೇಟೆಯಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಅದೊಂದು ಸರಕಾರಿ ಸ್ಥಳ ಬಿಟ್ಟರೆ ಬೇರೆ ಖಾಲಿ ಸ್ಥಳ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ನವರು ಆ ಸ್ಥಳ ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆರೋಗ್ಯ ಕೇಂದ್ರ ಕಟ್ಟಲು ಅಗತ್ಯ ಇದೆ ಎಂದು ಆ ಸ್ಥಳವನ್ನು ಕಾಯ್ದಿಡಬೇಕೆಂದು ಜಿಲ್ಲಾಧಿಕಾರಿಗಳು ಮತ್ತು ಇತರೆ ಅಧಿಕಾರಿಗಳು ಕೇಳಿಕೊಂಡು ಬಂದಿದ್ದಾರೆ ಎಂದರೆ ಸಾಕ್ಷಿ ನನಗೆ ಆ ಸಂದರ್ಭದಲ್ಲಿ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ನನಗೆ ಸದ್ರಿ ವಿಷಯ 2012 ರಲ್ಲಿ ಗೊತ್ತಾಯಿತು. ಮೇಲೆ ಹೇಳಿದ ಸರ್ವೆ ನಂಬ್ರದಲ್ಲ ಐದು ಸೆಂಟ್ಸ್ ಸ್ಥಳ ನನಗೆ ಮಂಜೂರು ಮಾಡಬೇಕೆಂದು ನಾನು ಅರ್ಜಿ ಕೊಟ್ಟ ವಿಷಯ ತಿಳಿದು ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ನವರು ತಹಶೀಲ್ದಾರರ ಸಮಕ್ಷಮ ತಕರಾರು ಸಲ್ಲಿಸಿದ್ದಾರೆ ಎಂದರೆ ನನಗೆ ಆಗ ಗೊತ್ತಾಗಲಿಲ್ಲ 2012 ರಲ್ಲಿ ಗೊತ್ತಾಯಿತು ಎಂದು ನುಡಿಯುತ್ತಾರೆ. ಒಂದನೇ ಪ್ರತಿವಾದಿ ಆ ರೀತಿ ಆಜಿ ಸಲ್ಲಿಸಿದ ಕಾರಣ ಏನೆಂದರೆ ಸಾರ್ವಜನಿಕರು ಸದ್ರಿ ಸ್ಥಳವನ್ನು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯ ಇದೆ ಅದನ್ನು ನನಗೆ ಮಂಜೂರು ಮಾಡಬಾರದು ಆ ಬಗ್ಗೆ ಕ್ರಮ ಕೈಗೊಳ್ಳಿ ಎಂದು ತೆಕ್ಕಟ್ಟೆ ಪಂಚಾಯತ್ ವ್ಯಾಪ್ತಿಯ ನಿವಾಸಿಗಳು ಒಂದನೇ ಪ್ರತಿವಾದಿ ಪಂಚಾಯತ್ ರವರನ್ನು ನಿವೇದಿಸಿಕೊಂಡರು ಎಂದರೆ ನನಗೆ ಆಗ ಗೊತ್ತಾಗಲಿಲ್ಲ 2012 ರಲ್ಲಿ ಗೊತ್ತಾಯಿತು. ಸದ್ರಿ ಮನವಿಯ ಪ್ರಕಾರ

ಸಾರ್ವಜನಿಕ ಉದ್ದೇಶಕ್ಕಾಗಿ ಒಂದನೇ ಪ್ರತಿವಾದಿ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಆಗ ಗೊತ್ತಾಗಲಿಲ್ಲ 2012 ರಲ್ಲಿ ಗೊತ್ತಾಯಿತು ಎಂದು ನುಡಿಯುತ್ತಾರೆ.

ತಹಶೀಲ್ದಾರರು ಸದ್ರಿ ಮನವಿಯನ್ನು ಪುರಸ್ಕರಿಸಿ ಕುಂದಾಪುರ ತಾಲೂಕು ಪಂಚಾಯತ್ ನವರಿಗೆ ಸದ್ರಿ ಸ್ಥಳವನ್ನು ನನಗೆ ಮಂಜೂರು ಮಾಡುವುದಿಲ್ಲ ಎದು ಲಿಖಿತ ರೂಪದಲ್ಲಿ ಬರೆದುಕೊಟ್ಟಿದ್ದರು ಎಂದರೆ ನನಗೆ ಆಗ ಗೊತ್ತಾಗಲಿಲ್ಲ 2012 ರಲ್ಲಿ ಗೊತ್ತಾಯಿತು. ತಹಶೀಲ್ದಾರರು ಆ ರೀತಿ ಬರೆದುಕೊಟ್ಟು ಅವರೇ ಬರೆದುಕೊಟ್ಟ ಲಿಖಿತ ದಾಖಲೆಯ ವಿರುದ್ಧವಾಗಿ ನನಗೆ ಗುಟ್ಟಿನಿಂದ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರ ಆದೇಶವಾದ ಪ್ರಕರಣದಲ್ಲಿ ತಹಶೀಲ್ದಾರರು ತಾಲೂಕು ಪಂಚಾಯತ್ ಗೆ ಲಿಖಿತವಾಗಿ ಹೇಳಿದ ದಾಖಲೆಯನ್ನು ಈ ದಾವೆಯ ಮೂರು ಮತ್ತು ನಾಲ್ಕನೇ ಪ್ರತಿವಾದಿಯರು ಸದ್ರಿ ದಾಖಲೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿ ತಹಶೀಲ್ದಾರರು ಆ ರೀತಿ ನನ್ನ ಹೆಸರಿಗೆ ಭೂ ಮಂಜೂರಾತಿ ಮಾಡಿರುವುದಿಲ್ಲ ಎಂದು ಬರೆದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ತಹಶೀಲ್ದಾರರು ಖಾಸಗೀಯವರಿಗೆ ಮಂಜೂರು ಮಾಡುವುದಿಲ್ಲ ಎಂದು ಬರೆದುಕೊಟ್ಟ ವಿಷಯ ನನಗೆ 2012 ರಲ್ಲಿ ಗೊತ್ತಾಯಿತು ಎಂದು ನುಡಿಯುತ್ತಾರೆ. ಹಾಗಾದರೆ ತಹಶೀಲ್ದಾರರು ಹಾಗೆ ಬರೆದುಕೊಟ್ಟ ದಾಖಲೆಯ ನಿಭಂಧನೆಯ ವಿರುದ್ಧವಾಗಿ ಮಂಜೂರು ಮಾಡಿದ್ದಾರಾ ಎಂದರೆ ಸಾಕ್ಷಿ ಅದು ತಹಶೀಲ್ದಾರರರಿಗೆ ಸಂಬಂಧಿಸಿದ್ದು ನನಗೆ ಸಂಬಂಧಿಸಿದ್ದು ಅಲ್ಲ ಎಂದು ನುಡಿಯುತ್ತಾರೆ. ಸದ್ರಿ ಸ್ಥಳ ನನಗೆ ವೈಯಕ್ತಿಕ ನೆಲೆಯಲ್ಲಿ ಮತ್ತು ವೈಯಕ್ತಿಕ ಉಪಯೋಗಕ್ಕಾಗಿ ಮಂಜೂರಾಗಿರುತ್ತದೆ. ನಾನು ಒಬ್ಬ ಖಾಸಗಿ ವ್ಯಕ್ತಿಯಾಗಿ ಸರಕಾರಿ ಭೂ ಮೌಲ್ಯ ಸಂದಾಯ ಮಾಡಿದ ಮೇಲೆ ಸದ್ರಿ ಭೂಮಿ ಮಂಜೂರಾಗಿರುತ್ತದೆ. ಅದು ಅಂದಾಜು ರೂ.5442-00 ಆಗಿರುತ್ತದೆ. ಈ ಸ್ಥಳ ರಾಷ್ಟ್ರೀಯ ಹೆದ್ದಾರಿಯಿಂದ ಅಂದಾಜು 25 ಮೀ. ಅಂತರದಲ್ಲಿದೆ. ಸದ್ರಿ ಆಸ್ತಿಯ ಮೌಲ್ಯ ಅಂದಾಜು ಸುಮಾರು ರೂ.25 ಲಕ್ಷ ಇರಬಹುದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ತಹಶೀಲ್ದಾರರು ಸದ್ರಿ ಆಸ್ತಿಯನ್ನು ಖಾಸಗೀಯವರಿಗೆ ಮಂಜೂರು ಮಾಡುವುದಿಲ್ಲ ಎಂದು ಹೇಳಿದ ಲಿಖಿತ ಹೇಳಿಕೆಯನ್ನು ನಿಪಿ.1 ರ ಪ್ರಕರಣದಲ್ಲಿ ಹಾಜರುಪಡಿಸಿದ ವಿಷಯ ನಿಪಿ.1 ರ ಆದೇಶದಲ್ಲಿ ಕಂಡುಬರುತ್ತದೆ ಎಂದರೆ ಸರಿ . ನಿಪಿ.1 ರಲ್ಲಿ ಪ್ರಶ್ನಿತವಾದ ದಿಃ 17-7-1999 ರ ಆದೇಶ ಆಗುವ ಪೂರ್ವದಲ್ಲಿ ತಹಶೀಲ್ದಾರರು ಆ ರೀತಿ ಹೇಳಿದ ಲಿಖಿತ ಹೇಳಿಕೆ ನನ್ನ ಗಮನದಲ್ಲಿತ್ತು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಹೇಳಿದ ಪ್ರಕರಣ ದಾಖಲಾದ ಮೇಲೆ ಮೇಲೆ ಹೇಳಿದ ವಿಷಯ ನನ್ನ ಗಮನಕ್ಕೆ ಬಂತು ಎಂದರೆ ಸರಿ . ಸದ್ರಿ ವಿಷಯ ನನಗೆ 2012 ರಲ್ಲಿ ಗೊತ್ತಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಹಶೀಲ್ದಾರರು ಮತ್ತು ಇತರೆ ಕಂದಾಯ ಅಧಿಕಾರಿಗಳ ಮೇಲೆ ಅಕ್ರಮ ಪ್ರಭಾವ ಬೀರಿ ನನಗೆ ಅಲ್ಲಿ ಹುಕುಂ ಮಂಜೂರಾತಿ ಪಡೆಯಲು ಯೋಗ್ಯತೆ ಇಲ್ಲದೇ ಇದ್ದರೂ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಭೂಮಿ ಯನ್ನು ನನಗೆ ಮಂಜೂರು ಮಾಡಿದರೆ ಅನೇಕ ಸಾರ್ವಜನಿಕರ ಉಪಯೋಗಕ್ಕೆ ತೊಂದರೆ ಆಗುತ್ತದೆ ಎಂದು ನಿಪಿ.1 ರ ಪ್ರರಣದಲ್ಲಿ ಒಂದನೇ ಪ್ರತಿವಾದಿ ಪಂಚಾಯತ್ ನ ಸಾಧನೆ ಆಗಿತ್ತು ಎಂದರೆ ಸರಿ. ನಾನು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸದಿದ್ದರೂ ಕೂಡ ಅದರಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಸುಳ್ಳು ಮಾಹಿತಿ ನೀಡಿ ನಿಪಿ.1 ಮತ್ತು ನಿಪಿ.2 ರ ಆದೇಶವನ್ನು ನನ್ನ ಪರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ರಿಂದ 3 ರ ಆದೇಶದಲ್ಲಿ ನಾನು ಮತ್ತು ನನ್ನ ಕುಟುಂಬದವರು ಭೂ ರಹಿತ ಕುಟುಂಬ ಎಂದು ಸಾಧನೆ ಮಾಡಿದ್ದೇನೆ ಎಂದರೆ ಸರಿ. ನಿಜವಾಗಿ ಆ ಸಮಯದಲ್ಲಿ ನನಗೆ ಮತ್ತು ನನ್ನ ಕುಟುಂಬದವರಿಗೆ ತೆಕ್ಕಟ್ಟೆ

ಗ್ರಾಮದಲ್ಲಿ ಸ್ಥಿರಾಸ್ತಿ ಇತ್ತು ಎಂದರೆ ಸಾಕ್ಷಿ ಭೂ ನ್ಯಾಯ ಮಂಡಳಿಯವರು ನೀಡಿದ ಐದು ಸೆಂಟ್ಸ್ ಸ್ಥಳ ಇತ್ತು ಅದು ನ್ಯಾಯಾಲಯದಲ್ಲಿ ತನಿಖೆಗೆ ಬಾಕಿ ಇತ್ತು ಎಂದು ನುಡಿಯುತ್ತಾರೆ. ಆ ಮೂರೂ ಪ್ರಕರಣಗಳಲ್ಲಿ ಒಂದನೇ ಪ್ರತಿವಾದಿ ಪಂಚಾಯತ್ ನವರು ನಾನು ಭೂ ರಹಿತನಲ್ಲ ನನಗೆ ಸೇರಿದ ಭೂಮಿ ಇದೆ ಎಂದು ಸಾಧನೆ ಮಾಡಿದ್ದರು ಎಂದರೆ ಸರಿ . ನನಗೆ ಭೂಮಿ ಮತ್ತು ಮನೆ ನಿವೇಶನ ಸ್ಥಳ ಇದ್ದರೂ ಸಹಾ ನಾನು ನಿಪಿ.1 ರಿಂದ ನಿಪಿ.3 ರ ಪ್ರಕರಣ ಇದ್ದ ನ್ಯಾಯಾಲಯಗಳಲ್ಲಿ ನಾನು ತಪ್ಪು ಮಾಹಿತಿ ನೀಡಲು ಸಫಲನಾಗಿದ್ದೆ ಎಂದರೆ ಸರಿಯಲ್ಲ. ಕಾನೂನು ಮತ್ತು ನ್ಯಾಯಬದ್ಧ ಕಾರಣಗಳಿಗಾಗಿ ಒಂದನೇ ಪ್ರತಿವಾದಿ ಗ್ರಾಮ ಪಂಚಾಯತ್ ನವರು ನನ್ನ ಪರ ಆದ ಆದೇಶವನ್ನು ಸಂಬಂಧಿತ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

ಭೂ ಮಂಜೂರಾತಿ ಪಡಯುವ ಬಗ್ಗೆ ನಾನು ನೀಡಿದ ಅರ್ಜಿ, ದಾಖಲೆ ಮತ್ತು ಮಾಹಿತಿ ನಿಮ್ಮ ಹತ್ತಿರ ಇದೆಯಾ ಎಂದರೆ ಸಾಕ್ಷಿ ನನ್ನ ಹತ್ತಿರ ಇಲ್ಲ ಸಂಬಂಧಿತ ಇಲಾಖೆಯಿಂದ ಪಡೆಯಬಹುದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನನ್ನ ಬಳಿ ದೃಢೀಕೃತ ದಾಖಲೆ ಇಲ್ಲ ಅದು ಮನೆಯಲ್ಲಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಭೂ ಮಂಜೂರಾತಿ ಕೋರಿ ನಿಪಿ.1 ರ ಪ್ರಕರಣದಲ್ಲಿ ನಾನು ಅರ್ಜಿ ಸಲ್ಲಿಸಿದ್ದೇನೆ. ಆ ರೀತಿ ಭೂ ಮಂಜೂರಾತಿ ಕೇಳಿದ ಸ್ಥಳ ನಮ್ಮ ಕಬ್ಜೆಯಲ್ಲಿದ್ದು ಅದನ್ನು ನಾವು ಕಾಪಾಡಿಕೊಂಡು ಬಂದಿರುತ್ತೇವೆ ಎಂದು ಈ ದಾವೆಯ ಒಂದನೇ ಪ್ರತಿವಾದಿ ಪಂಚಾಯತ್ ನವರು ತಮ್ಮ ಅಹವಾಲನ್ನು ಹೇಳಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಆ ಸಮಯದಲ್ಲಿ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ವಿಷಯ ಭೂ ಮಂಜೂರಾತಿ ಪಡೆಯುವ ಮುಂಚೆ ತಿಳಿದಿತ್ತು ಎಂದರೆ ಸರಿಯಲ್ಲ. ಸ್ದ್ರಿ ವಿಷಯ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ 2012 ರಲ್ಲಿ ಗೊತ್ತಾಯಿತು ಎಂದು ನುಡಿಯುತ್ತಾರೆ. ಪ್ರತಿವಾದಿ ಗ್ರಾಮ ಪಂಚಾಯತ್ ನವರು ಸಾರ್ವಜನಿಕ ಹಿತಾಸಕ್ತಿಯಿಂದ ನಿಪಿ.3 ರಲ್ಲಿ ಹೇಳಿದ ಪ್ರಕರಣವನ್ನು ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ತಾಂತ್ರಿಕ ಕಾರಣಗಳಿಗಾಗಿ ಸಂಬಂಧಿತ ನ್ಯಾಯಾಲಯದವರು ವಜಾಗೊಳಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಆ ಮೂರುಾ ಪ್ರಕರಣಗಳಲ್ಲಿ ವಕೀಲರನ್ನು ನೇಮಿಸಿಕೊಂಡು ಆಕ್ಷೇಪಣೆಯನ್ನು ಸಲ್ಲಿಸಿರುತ್ತೇನೆ. ಆ ಪ್ರಕರಣಗಳಲ್ಲಿ ಖರ್ಚು ಸಮೇತ ಅವುಗಳನ್ನು ವಜಾ ಮಾಡಗಬೇಕೆಂದು ಕೇಳಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಮೂರುಾ ಪ್ರಕರಣಗಳಲ್ಲಿ ಸಂಬಂಧಿತ ನ್ಯಾಯಾಲಯದವರು ನಾನು ಕೇಳಿದಂತೆ ಯಾವುದೇ ಖರ್ಚನ್ನು ನೀಡಿರುವುದಿಲ್ಲ ಎಂದರೆ ಸರಿ . ಅದೇ ರೀತಿ ಆ ದಾವೆಗಳಲ್ಲಿ ಪ್ರತಿವಾದಿಯರ ವಿರುದ್ಧ ದಾವೆ ಹೂಡಲು ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ.

(ಮುಂದುವರಿದ ಪಾಟಿ ಸವಾಲಿಗಾಗಿ ಮುಂದೂಡಲಾಯಿತು)

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ